# ಒಪೆರಾ ಹೌಸ್

## ಬೆಲೆ ಕಟ್ಟಲಾಗದ ‘ಬ್ರ್ಯಾಂಡ್’



ಶ್ರೇಷ್ಠ ಕಲಾಕೃತಿಗಳು ಹೊಮ್ಮಿಸುವಂತಹ ಹಲವು ಭಾವಗಳನ್ನು ಸಿಡ್ನಿ ಒಪೆರಾ ಹೌಸ್ ಹೊಮ್ಮಿಸುತ್ತದೆ. 50 ವರ್ಷಗಳ ಸಂಭ್ರಮಾಚರಣೆಯಲ್ಲಿರುವ ಈ ಅದ್ಭುತ ಕಟ್ಟಡ ನಿರ್ಮಾಣದ ಹಿಂದಿನ ಕಥಾನಕದಲ್ಲಿ, ಮಾಯದ ಗಾಯಗಳು ಹಾಗೂ ಇತ್ಯರ್ಥವಾಗದ ವಾದವಿವಾದಗಳೂ ಸಾಕಷ್ಟಿವೆ.

■ ಸಿ.ಜಿ. ಮಂಜುಳಾ

‘ಒಪೆರಾ ಹೌಸ್’ – ಸಿಡ್ನಿಯ ಮೋಹಕ ಕಟ್ಟಡ. ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ರಾಜ್ಯದ ರಾಜಧಾನಿ ಹಾಗೂ ಆಸ್ಟ್ರೇಲಿಯಾದ ದೊಡ್ಡ ನಗರಗಳಲ್ಲಿ ಒಂದಾದ ಸಿಡ್ನಿಯ ಹೆಗ್ಗುರುತು. ‘ಬರೀ 20ನೇ ಶತಮಾನದಲ್ಲಲ್ಲ, ಇಡೀ ಮನುಕುಲದ ಇತಿಹಾಸದಲ್ಲಿ ಮಾನವ ಸೃಜನಶೀಲತೆಯ ನಿರ್ವಿವಾದದ ಮೇರುಕೃತಿಗಳಲ್ಲಿ ಒಂದು’ ಎಂದು ‘ವಿಶ್ವ ಪರಂಪರೆ ತೀರ್ಪು ಸಮಿತಿ’ಯಿಂದ (ವರ್ಲ್ಡ್ ಹೆರಿಟೇಜ್ ಜಡ್ಜಿಂಗ್ ಕಮಿಟಿ) ಬಣ್ಣಿಸಿಕೊಂಡಂತಹ ಕಟ್ಟಡ ಇದು.

ಈ ಕಟ್ಟಡವೀಗ 50 ವರ್ಷಗಳ ಸಂಭ್ರಮಾಚರಣೆಯಲ್ಲಿದೆ. 1973ರ ಅಕ್ಟೋಬರ್ 20ರಂದು ಬ್ರಿಟನ್ ಸಾಮ್ರಾಜ್ಞಿ ಎರಡನೇ ಎಲಿಜಬೆತ್ ಈ ಕಟ್ಟಡ ಉದ್ಘಾಟಿಸಿದ್ದರು. ಈ ಕಟ್ಟಡದ ನಿರ್ಮಾಣ ವೆಚ್ಚ 10 ಕೋಟಿ ಆಸ್ಟ್ರೇಲಿಯನ್ ಡಾಲರ್‌ಗಳು. ಉದ್ಘಾಟನೆಯಾದಾಗಲಿಂದ ಪ್ರವಾಸಿ ಆಕರ್ಷಣೆಯಾಗಿ, ಸಾಂಸ್ಕೃತಿಕ ಕೇಂದ್ರವಾಗಿ ಈ ಮೊತ್ತದ ಹಲವು ಪಟ್ಟು ಹಣವನ್ನು ‘ಒಪೆರಾ ಹೌಸ್’ ವಾಪಸ್ ಗಳಿಸಿಕೊಟ್ಟಿದೆ. ‘ಬ್ರ್ಯಾಂಡ್’ ಆಗಿ ಇದು ಬೆಲೆ ಕಟ್ಟಲಾಗದಷ್ಟು ಅಮೂಲ್ಯವಾದದ್ದು.

ಇತ್ತೀಚೆಗೆ ಎರಡೂವರೆ ತಿಂಗಳಿಗೂ ಹೆಚ್ಚು ಕಾಲ ಸಿಡ್ನಿಯಲ್ಲಿದ್ದ ಸಂದರ್ಭದಲ್ಲಿ ಈ ಒಪೆರಾ ಹೌಸ್‌ನ ಹೊರಭಾಗದ ಸೊಬಗನ್ನು ಕಣ್ಣಲ್ಲಿ, ಕ್ಯಾಮೆರಾದಲ್ಲಿ ತುಂಬಿಕೊಂಡದ್ದು ಅದೆಷ್ಟು ಬಾರಿಯೋ ಲೆಕ್ಕವಿಲ್ಲ. ಪ್ರತಿ ಸಾರಿ ನೋಡಿದಾಗಲೂ ಹೊಸ ಹೊಸ ನೋಟಗಳ ತರಂಗಗಳನ್ನು ಮನದಾಳಕ್ಕೆ ಇಳಿಸುವ, ಸೆಳೆಯುವ ಮಾಂತ್ರಿಕ ಶಕ್ತಿಯ ಕಟ್ಟಡವೆನಿಸುತ್ತಿತ್ತು ನಮಗೆ. ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ – ಹೀಗೆ ದಿನದ ಎಲ್ಲಾ ಹೊತ್ತುಗಳಲ್ಲೂ ಧೀಮಂತವಾಗಿ, ಆಕರ್ಷಕವಾಗಿ, ಮೋಹಕವಾಗಿ, ಮುದ್ದಾಗಿ, ಹಲ ಬಗೆಗಳ ಭಾವಸ್ಫುರಣವನ್ನು ಈ ಮನುಷ್ಯ ನಿರ್ಮಿತ ಕಟ್ಟಡ ನಮಗೆ ಹೊಮ್ಮಿಸುತ್ತಿದ್ದದ್ದು ವಿಶೇಷ.

### ಅಪೂರ್ವ ಸ್ಮೃತಿಯಾತ್ರೆ

ವಿಶ್ವದ ಅದ್ಭುತ ವಾಸ್ತುಶಿಲ್ಪಗಳಲ್ಲಿ ಒಂದಾದ ಒಪೆರಾ ಹೌಸ್ ಕುರಿತಾದ ವಸ್ತುಪ್ರದರ್ಶನದ ಮೂಲಕ, ಐದು ದಶಕಗಳ ಇತಿಹಾಸಕ್ಕೆ ‘ಸಿಡ್ನಿ ಮ್ಯೂಸಿಯಂ’ ಗೌರವ ಸಲ್ಲಿಸುತ್ತಿದೆ. ಕಳೆದ ಐದು ದಶಕಗಳ ರಂಗ ಪ್ರದರ್ಶನಗಳು, ಸಾರ್ವಜನಿಕ ಸಮಾರಂಭಗಳು ಹಾಗೂ ವಿವಿಧ ಕಾರ್ಯಕ್ರಮಗಳ ಆಚರಣೆಗಳ ಸ್ಮೃತಿಯಾತ್ರೆಯಾಗಿರುವ ಈ ಪ್ರದರ್ಶನದ ವೀಕ್ಷಣೆಯಿಂದ ಒಪೆರಾ ಹೌಸ್ ಆಕರ್ಷಣೆ ನಮಗೆ ಇಮ್ಮಡಿಯಾಯಿತು. ಸಿಡ್ನಿಯ




ಪ್ಲೇಟ್‌ನಲ್ಲಿ ಒಪೆರಾ ಹೌಸ್ ಚಿತ್ರ